372 (146) ಶ್ರೀ ಸುನೀಲ್ ಕುಮಾರ್.ಎ (ಕಾರ್ಕಳ): ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಮಲೆನಾಡು ಪ್ರದೇಶ ವ್ಯಾಪ್ತಿಯಲ್ಲಿ ಇತ್ತೀಚೆಗೆ ನಕ್ಸಲೀಯರ ಚಟುವಟಿಕೆಗಳು ವ್ಯಾಪಕವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಇದರ ನಿವಾರಣೆಗೆ ಸರ್ಕಾರ ಯಾವ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದೆ.

ಇ) ಈಗಾಗಲೇ ಎಷ್ಟು ಜನರನ್ನು ಬಂಧಿಸಲಾಗಿದೆ, ತಲೆಮರೆಸಿಕೊಂಡಿರುವವರು ಎಷ್ಟು? ಈ ತಂಡಗಳು ಎಲ್ಲೆಲ್ಲಿ ಬೀಡುಬಿಟ್ಟಿವೆ (ವಿವರ ನೀಡುವುದು);

ಈ) ನಕ್ಸಲ್ ಕಾರ್ಯಾಚರಣೆ ಸಂದರ್ಭದಲ್ಲಿ ಸಾವಿಗಿಡಾದವರೆಷ್ಟು;

ಉ) ಈ ನಿಟ್ಟಿನಲ್ಲಿ ನಕ್ಸಲ್ ಪೀಡಿತ ಜಾಗಕ್ಕೆ ಏನಾದರೂ ವಿಶೇಷ ಪ್ಯಾಕೇಜ್ ನೀಡುವ ಇರಾದೆ ಸರ್ಕಾರಕ್ಕಿದೆಯೇ: ಇದ್ದಲ್ಲಿ, ಯಾವ ಯಾವ ಗ್ರಾಮಕ್ಕೆ ಎಷ್ಟೆಷ್ಟು ಒದಗಿಸಲಾಗುವುದು;

ಊ) ನಕ್ಸಲೀಯರ ಧಮನಕ್ಕೆ ಎಸ್‌ಟಿಎಫ್ ಪಡೆ ನಿಯೋಜಿಸುವ ನಿರ್ಧಾರವನ್ನು ಸರ್ಕಾರ ಮಾಡಿರುವುದು ನಿಜವೇ: ಹಾಗಿದ್ದಲ್ಲಿ, ಎಷ್ಟು ತುಕಡಿಗಳನ್ನು ನಿಯೋಜಿಸಲಾಗುವುದು: ಯಾವಾಗಿನಿಂದ ಕಾರ್ಯಾನುಷ್ಠಾನಕ್ಕೆ ತರಲಾಗುವುದು?

ಶ್ರೀ ಎನ್. ಧರ್ಮಸಿಂಗ್ (ಮುಖ್ಯ ಮಂತ್ರಿಯವರು):

ಅ) ಹೌದು.

ಆ) ಮಲೆನಾಡಿನಲ್ಲಿ ನಕ್ಸಲೀಯರ ಚಟುವಟಿಕೆಗಳನ್ನು ನಿಗ್ರಹಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1) ಮಲಾನಾಡಿನ ನಕ್ಸಲ್ ಪೀಡಿತ 4 ಜಿಲ್ಲೆಗಳಲ್ಲಿ ಪ್ರತಿಯೊಂದು ಜಿಲ್ಲೆಯಲ್ಲಿಯೂ ಒಬ್ಬ ಪೊಲೀಸ್ ಇನ್ಸ್‌ಪೆಕ್ಟರ್ ನೇತೃತ್ವದಲ್ಲಿ ಮತ್ತು 12–15 ಇತರ ಸಿಬ್ಬಂದಿಗಳ ಬಲದ ನಕ್ಸಲೀಯ ನಿಗ್ರಹ ದಳವನ್ನು ರಚಿಸಲಾಗಿರುತ್ತದೆ.

2) ಈ 4 ಜಿಲ್ಲೆಗಳಲ್ಲಿಯೂ ನಕ್ಸಲೀಯ ವಿರೋಧಿ ಕಾರ್ಯಾಚರಣೆಯ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲು ಐಜಿಪಿ, ಪಶ್ಚಿಮ ವಲಯ, ಮಂಗಳೂರು ರವರು ನೋಡಲ್ ಆಫೀಸರ್‌ರನ್ನಾಗಿ ಮಾಡಲಾಗಿದೆ.

3) ನಕ್ಸಲೀಯ ನಿಗ್ರಹ ದಳವು ನಕ್ಸಲೀಯರು ಕಾರ್ಯಾಚರಣೆ ನಡೆಸುತ್ತಿರುವರೆಂದು ಶಂಕಿಸಲಾದ ಪ್ರದೇಶಗಳಾದ ಅರಣ್ಯಗಳನ್ನು ಸತತವಾಗಿ ಸುತ್ತುವರಿದು ಹುಡುಕುವ ಕಾರ್ಯವನ್ನು ನಡೆಸುವರು. ಹಿರಿಯ ಪೊಲೀಸ್ ಅಧಿಕಾರಿಗಳಾದ ಐಜಿಪಿ, ಪಶ್ಚಿಮ ವಲಯ, ಎಸ್.ಪಿ, ಹೆಚ್ಚುವರಿ ಎಸ್.ಪಿ ರವರು ನಕ್ಸಲೀಯರ ಚಟುವಟಿಕೆಗಳ ಬಗ್ಗೆ ಪ್ರಯೋಜನಕಾರಿಯಾದ ಮಾಹಿತಿ ದೊರಕಿದ ಕೂಡಲೇ ಅಂತಹ ಅರಣ್ಯ ಪ್ರದೇಶಗಳಲ್ಲಿ ನಕ್ಸಲೀಯ ವಿರೋಧಿ ಕಾರ್ಯಾಚರಣೆಯನ್ನು ತಾವು ಖುದ್ದಾಗಿ ನಡೆಸುವರು.

4) ನಕ್ಸಲ್ ಪೀಡಿತ ಪ್ರದೇಶಗಳಲ್ಲಿರುವವರ ಗ್ರಾಮಗಳಲ್ಲಿನ ಪ್ರಜೆಗಳಿಗೆ ಭದ್ರತೆ ಹಾಗೂ ಆತ್ಮ ವಿಶ್ವಾಸದ ಭಾವನೆಯನ್ನು ಮೂಡಿಸಲು ಪೊಲೀಸ್ ಸಿಬ್ಬಂದಿಗಳು, ಕಂದಾಯ ಮತ್ತು ಅರಣ್ಯ ಇಲಾಖೆಯ ಅಧಿಕಾರಿಗಳು ಆಗಿಂದಾಗ್ಗೆ ಭೇಟಿ ನೀಡುವರು. ಅವರು ಸರ್ಕಾರದಿಂದ ಕೈಗೊಂಡ ಅಭಿವೃದ್ಧಿ ಹಾಗೂ ಪುನರ್ವಸತಿ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ವಾಸ್ತವಿಕ ಮಾಹಿತಿಯನ್ನು ಗ್ರಾಮಸ್ಥರಿಗೆ ನೀಡುವರು.

5) ಪೊಲೀಸ್, ಕಂದಾಯ ಮತ್ತು ಅರಣ್ಯ ಇಲಾಖೆಯ ಅಧಿಕಾರಿಗಳು ನಕ್ಸಲ್ ಪೀಡಿತ ಪ್ರದೇಶದಲ್ಲಿ ಸಾರ್ವಜನಿಕ ಸಂಪರ್ಕ ಕಾರ್ಯಕ್ರಮಗಳನ್ನು ನಡೆಸುವರು.

6) ಕುದುರೆಮುಖ ಪ್ರದೇಶದಲ್ಲಿನ ಗುಡ್ಡಗಾಡು ಜನಗಳ ಸಮಸ್ಯೆಗಳನ್ನು ಅಭ್ಯಸಿಸಲು ಹಾಗೂ ಅದನ್ನು ಪರಿಹಾರ ಮಾಡಲು ಸೂಕ್ತ ಅಭಿವೃದ್ಧಿ/ಪುನರ್ವಸತಿ ಕಾರ್ಯಗಳನ್ನು ಸಲಹೆ ಮಾಡಲು ಉನ್ನತ ಮಟ್ಟದ ಸಮಿತಿಗಳನ್ನು ರಚಿಸಲಾಗಿರುತ್ತದೆ.

ಇ)ಒಬ್ಬರನ್ನು ಬಂಧಿಸಲಾಗಿದೆ, 52 ನಕ್ಸಲೀಯರು ತಲೆಮರೆಸಿಕೊಂಡಿರುತ್ತಾರೆ, ನಕ್ಸಲೀಯರ ತಂಡಗಳು ಮಲೆನಾಡಿನ ಅರಣ್ಯ ಪ್ರದೇಶಗಳಲ್ಲಿ 2 ತಂಡಗಳಲ್ಲಿ ಬೀಡುಬಿಟ್ಟಿವೆ.

ಈ) ಒಬ್ಬ ಮಹಿಳೆ ಮೃತಪಟ್ಟಿರುತ್ತಾರೆ.

ಉ) ಪರಿಶೀಲಿಸಲಾಗುವುದು.

ಊ) ಪರಿಶೀಲಿಸಲಾಗುವುದು.

373 (147) ಶ್ರೀ ಸುನೀಲ್‌ಕುಮಾರ್ ವಿ. (ಕಾರ್ಕಳ): ಮಾನ್ಯ ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈ ಹಿಂದೆ ಜಿಲ್ಲಾ ಕೇಂದ್ರದಿಂದ 20ಕಿ.ಮೀ. ವ್ಯಾಪ್ತಿಯಲ್ಲಿ ಖಾಸಗೀ ಬಸ್‌ಗಳ ಸೇವೆಗೆ ಅವಕಾಶ ಕಲ್ಪಿಸುವ ಸ್ಟೇಜ್ ಕ್ಯಾರಿಯೇಜ್ ಪದ್ಧತಿ ಜಾರಿಯಲ್ಲಿತ್ತೆ?

ಆ) ಈ ಪದ್ಧತಿಯನ್ನು ಈ ಸರ್ಕಾರ ರದ್ದು ಪಡಿಸಲು ನಿರ್ಧರಿಸುವುದು ನಿಜವೇ?

ಇ) ಇದಕ್ಕೆ ಕಾರಣಗಳೇನು?

ಈ) ಇದರಿಂದಾಗಿ ಸಾರಿಗೆ ಸಂಸ್ಥೆಯ ಆದಾಯಕ್ಕೆ ಕತ್ತರಿ ಬೀಳುವ ಭಯವಿದೆಯೇ?

ಉ) ಇದನ್ನು ತಾತ್ಕಾಲಿಕ ಸ್ಥಗಿತಗೊಳಿಸಿರುವುದು ನಿಜವೇ?

ಊ) ಈ ನಿಟ್ಟಿನಲ್ಲಿ ಬೇಂದ್ರೆ ನಗರ ಸಾರಿಗೆ ಸಂಸ್ಥೆಗೆ ಅನುಮತಿ ನೀಡಿರುವುದರ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು):

ಅ) ಹೌದು.

ಆ) ಪರಿಶೀಲನೆಯಲ್ಲಿದೆ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಹೌದು.

ಊ) ಕಾನೂನು ರೀತಿ ಕ್ರಮ ವಹಿಸಲು ಸರ್ಕಾರ ಬದ್ಧವಾಗಿದೆ.

374 (404) ಶ್ರೀ ಸುನೀಲ್ ಕುಮಾರ್ ವಿ. (ಕಾರ್ಕಳ): ಮಾನ್ಯ ಉಪಮುಖ್ಯಮಂತ್ರಿಯವರು ಹಾಗೂ ಹಣಕಾಸು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾನವ ಸಂಪನ್ಮೂಲ ಅಂಕಿ-ಅಂಶದ ಹೆಸರಿನಲ್ಲಿ ರಾಜ್ಯ ಸರ್ಕಾರಿ ನೌಕರರ ಕುರಿತು ಸಮಗ್ರವಾದ ವಿವರಗಳನ್ನು ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ

ಆ) ಬಂದಿದ್ದಲ್ಲಿ ಸರ್ಕಾರಿ ನೌಕರರ ಮಾಹಿತಿ ಸಂಗ್ರಹದ ಉದ್ದೇಶಗಳೇನು;